ಪಾತ್ರೆ, ಇನ್ನಷ್ಟು ಮಗದಷ್ಟು ಹಿತ್ತಾಳೆ, ತಾಮ್ರ, ಕಂಚಿನ ಪುರಾಣಿ ವಸ್ತುಗಳು ತಮ್ಮ ವೈಭವವನ್ನು ಮೆಲುಕು ಹಾಕುತ್ತಿರುವಂತೆ ತೋರುತ್ತವೆ. ಪುರಾತನ ಕಾಲದಲ್ಲಿ ಬಳಸುತ್ತಿದ್ದ ಹಿತ್ತಾಳೆಯ ಗ್ಯಾಸ್ ರೆಗ್ಯುಲೇಟರ್ ಕಂಡಾಗ ಹುಬ್ಬೇರಿಸದಿರಲು ಸಾಧ್ಯವೇ ಇಲ್ಲ.

ಮನೆಯ ಚಾವಣಿಯನ್ನು ಬಲವಾಗಿ ಹಿಡಿದಿಡಲು ಬಳಸುತ್ತಿದ್ದ 'ನೆತ್ತಿ ಜಂತಿ' ಆಗಿನ ಎಂಜಿನಿಯರಿಂಗ್ ಕೌಶಲಕ್ಕೆ ನಿದರ್ಶನದಂತಿದೆ. ಪಿರಿಯಾಪಟ್ಟಣದಿಂದ ತಂದು ಜತನದಿಂದ ಕಾಪಿಟ್ಟುಕೊಂಡಿರುವ ಹಳೆಯ ಬಾಗಿಲೊಂದು ತಲೆಮಾರುಗಳ ಜೀವನಗಾಥೆಯನ್ನು ಮೌನದಲ್ಲೇ ಹೇಳುವಂತೆ ನಿಂತಿದೆ.

ಮನೆಯ ಮೊದಲ ಮಹಡಿಯಲ್ಲಿ ಇನ್ನೊಂದಷ್ಟು ಅಚ್ಚರಿಗಳು ಜೊತೆಯಾಗುತ್ತವೆ. ದವಸ ಧಾನ್ಯಗಳನ್ನು ಅಳೆಯುತ್ತಿದ್ದ ಸೇರು, ಪಾವು, ಚಟಾಕು ಸೇರಿದಂತೆ ಹಲವು ಅಳತೆ ಸಾಮಗ್ರಿಗಳು, ಸರ್ವೆ ವಸ್ತುಗಳು, ಅಳತೆ ಪಟ್ಟಿಗಳನ್ನು ಅಚ್ಚುಕಟ್ಟಾಗಿ ಇಡಲಾಗಿದೆ. ಮನೆಯ ಒಳಾಂಗಣದಲ್ಲಿ ಜೋಡಿಸಿರುವ, ಹಿರೀಕರು ಬಳಸುತ್ತಿದ್ದ ಒಗ್ಗರಣೆ ಪಾತ್ರೆ, ಉಪ್ಪು, ಮೆಣಸು, ತುಪ್ಪದ ಡಬ್ಬಗಳು, ಚಮಚಗಳು, ಮುದ್ದೆ ಕಟ್ಟುತ್ತಿದ್ದ ಪಾತ್ರೆ ನಳಪಾಕದ ಝಲಕ್ ತೋರುತ್ತವೆ. ನೂರಾರು ವಸ್ತುಗಳ ಸಂಗ್ರಹವಷ್ಟೇ ಅಲ್ಲ, ಅವುಗಳನ್ನು ಒಪ್ಪವಾಗಿಟ್ಟಿರುವ ಕಲೆಯೂ ಗಮನ ಸೆಳೆಯುತ್ತದೆ.





ವಸ್ತುಗಳಲ್ಲಿ ಮಾತ್ರವಲ್ಲ, ಮನೆಯ ರಚನೆಯಲ್ಲಿ ಕೂಡ ಪುರಾತನ ಶೈಲಿ ಮಿಳಿತವಾಗಿದೆ. ಬ್ರಿಟಿಷರ ಕಾಲದ ಕಿಟಕಿ ವಿನ್ಯಾಸವನ್ನು ಮನೆಗೆ ಒಗ್ಗಿಸಲು ಹರಸಾಹಸ ಪಟ್ಟ ಕಥೆಯನ್ನು ಮುರಳಿ ಖುಷಿಯಿಂದ ಹಂಚಿಕೊಳ್ಳುತ್ತಾರೆ. ಅದಕ್ಕೆ ಬಳಸಿರುವ ಕಬ್ಬಿಣದ ಚಿಲಕಗಳೂ ಹಳೇ ಕಾಲದವೇ. ಇವರ ಸಂಗ್ರಹದಲ್ಲಿರುವ ಗ್ರಾಮಾಫೋನ್‌ಗಳು, ಮರ್ಫಿ ರೇಡಿಯೊ ಮತ್ತೊಂದು ವಿಶೇಷ. ಮೂರು ಗ್ರಾಮಾಫೋನ್‌ಗಳು, ಗ್ರಾಮಾಫೋನ್ ಕ್ಯಾಸೆಟ್‌ಗಳಿದ್ದು, ಹಾಡುಗಳನ್ನೂ ಕೇಳುತ್ತಾರೆ.

ಪೀಠೋಪಕರಣಗಳಲ್ಲೂ ಇವರ ಆದ್ಯತೆ 'ವಿಂಟೇಜ್'. ಬಾರ್ ಕೌಂಟರ್, ಓದುವ ಮೇಜು, ಮಂಚ, ಕುರ್ಚಿ ಎಲ್ಲದರಲ್ಲೂ ಪುರಾತನ ವಿನ್ಯಾಸ ಸೇರಿಕೊಂಡಿದೆ. ಹಳೆಯ ಮರದ ಬೊಡ್ಡೆಗಳು ಇಲ್ಲಿ ಕಲೆಯ ರೂಪ ಪಡೆದುಕೊಂಡಿವೆ. ಮಕ್ಕಳ ಕೋಣೆಯಲ್ಲಿಟ್ಟಿರುವ ಸೀಬೆ ಮರದ ಕೊರಡು ಇವರ ಕ್ರಿಯಾಶೀಲತೆಗೆ ಕನ್ನಡಿ. ಧೂಪದ ಮರದ ಸಂದೂಕ ಸಂಗ್ರಹಕ್ಕೆ ಹೊಸ ಸೇರ್ಪಡೆ.

'ಇಂದಿರಾನಗರದ ಸೆಕೆಂಡ್ಸ್ ಅಂಗಡಿಯಲ್ಲಿ ಇದನ್ನು ಯಾರೋ ಆ ದಿನವಷ್ಟೇ ಕೊಟ್ಟು ಹೋಗಿದ್ದರು. ನೋಡಿದ್ದೇ ತಡ, ನಮ್ಮ ಮನೆಗೆ ತೆಗೆದುಕೊಂಡು ಬಂದೆ. ಇದರ ಹಿಂದೆ ಸುಮಾರು 80–90 ವರ್ಷಗಳ ಕಥೆ ಇರಬಹುದು' ಎಂದು ಸಂದೂಕದ ಬಗ್ಗೆ ವಿವರಿಸುತ್ತಾರೆ ಮುರಳಿ.

### ಹಳತೆಂದರೆ ಆಕರ್ಷಣೆ

'ಹಳೆಯ ವಸ್ತುಗಳೆಂದರೆ ನಮಗೇನೋ ಪ್ರೀತಿ, ಆಕರ್ಷಣೆ. ಎಲ್ಲೇ ಹೋದರೂ ನಮ್ಮ ಕಣ್ಣು ಮೊದಲು ಹರಿಯುವುದು ಇಂಥ ಅಪರೂಪದ ವಸ್ತುಗಳ ಕಡೆಗೇ. ಅವುಗಳ ಹಿಂದಿನ ಕಥೆ ಏನಿರಬಹುದು ಎಂಬ ಕುತೂಹಲ ನಮ್ಮದು. ಇಂಥ ವಸ್ತುಗಳನ್ನು ತೆಗೆದುಕೊಳ್ಳುವಾಗ ಹಿನ್ನೆಲೆ ಕೇಳಿಕೊಳ್ಳುತ್ತೇವೆ' ಎಂದು ತಮ್ಮ ಸಂಗ್ರಹದ ಕುರಿತು ಉತ್ತರಿಸುತ್ತಾರೆ.

ಮುರಳಿ ಮೂಲತಃ ಕೊಡಗಿನವರು. ಮೌನ ಮಂಗಳೂರಿನವರು. ಬ್ರಿಡ್ಜ್ ಲೈನ್ ಮ್ಯಾನೇಜ್ಮೆಂಟ್ ಸರ್ವೀಸಸ್ ಹಾಗೂ ಸಮಿತ್ ಇಂಟೆಗ್ರೇಟೆಡ್ ಸರ್ವೀಸಸ್ ಕಂಪನಿಗಳ ಮಾಲೀಕ ಮುರಳಿ ಅವರಲ್ಲಿ ಚಿಕ್ಕಂದಿನಿಂದಲೂ ಅಪರೂಪದ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸ. ಅಂಚೆಚೀಟಿ, ಗಣೇಶನ ವಿಗ್ರಹಗಳನ್ನು ಸಂಗ್ರಹಿಸುತ್ತಿದ್ದ ಅವರಿಗೆ ನಂತರ ಕಲಾತ್ಮಕ, ಪುರಾತನ ವಸ್ತುಗಳಲ್ಲಿ ಆಸಕ್ತಿ ಮೂಡಿತು.

ಮುರಳಿ ಅವರ ತಾತ ಬ್ರಿಟಿಷರ ಕಾಲದಲ್ಲಿ ಸರ್ವೆಯರ್ ಆಗಿದ್ದವರು. ಹೀಗಾಗಿ ತಮ್ಮ ಹಿರೀಕರಿಂದಲೇ ಇವರು ಹಲವು ವಸ್ತುಗಳನ್ನು ಸಂಗ್ರಹಿಸಿದ್ದಾರೆ. ಗುಜರಿ ಅಥವಾ ಸೆಕೆಂಡ್ ಹ್ಯಾಂಡ್ ಅಂಗಡಿಗಳಲ್ಲಿ ಮೂಲೆ ಸೇರಿದ್ದ ಇಂಥ ಅಪರೂಪದ ವಸ್ತುಗಳನ್ನು ಹೆಕ್ಕಿ ತಂದಿದ್ದಾರೆ. ನೆಂಟರಿಷ್ಟರ ಮನೆಯಿಂದಲೂ ಬಂದ ಸಾಮಾನುಗಳಿವೆ. ಪ್ರಾಚೀನ ಮಾತ್ರವಲ್ಲದೇ ಎಲ್ಲಾ ರೀತಿಯ ಕಲಾತ್ಮಕ ವಸ್ತುಗಳನ್ನೂ ಸಂಗ್ರಹಿಸಿಡುವುದು ಇವರ ರೂಢಿ.

ಮಕ್ಕಳಾದ ಗಗನ್ ಕುಟ್ಟಪ್ಪ ಹಾಗೂ ಪೂರ್ಣ





ಅವರಿಗೆ ಅಪ್ಪ ಅಮ್ಮನ ಕ್ರಿಯಾಶೀಲತೆ ಬಗ್ಗೆ ಅಪಾರ ಗೌರವ. ಉಡುಪಿಯ ಮಣಿಪಾಲದಲ್ಲಿ ಬಿ.ಟೆಕ್. ಓದುತ್ತಿರುವ ಗಗನ್ ಅವರಿಗೆ ಛಾಯಾಗ್ರಹಣದಲ್ಲಿ ಆಸಕ್ತಿಯಿದ್ದು, ಇದರದ್ದೇ ವಿಶೇಷ ಸಂಗ್ರಹ ಮಾಡುವ ಕನಸು.

### ಸಸ್ಯ-ಪ್ರಾಣಿ ಪ್ರೀತಿಯ 'ನಮ್ಮನೆ'

ಪ್ರತಿ ಜೀವಿಗಳನ್ನೂ ಪ್ರೀತಿಸಬೇಕೆನ್ನುವ ಮೌನ ಅವರು ತಮ್ಮ ಮನೆಯಲ್ಲಿ ನೂರಾರು ಗಿಡಗಳನ್ನು ಪೋಷಿಸುತ್ತಿದ್ದಾರೆ. ಮನೆಯ ಎಲ್ಲಾ ದಿಕ್ಕುಗಳಲ್ಲೂ ಥರಾವರಿ ಗಿಡಗಳು. ಬೋನ್ಸಾಯ್, ಸಕ್ಯುಲೆಂಟ್ ಗಿಡಗಳ ದೊಡ್ಡ ಸಂಗ್ರಹದೊಂದಿಗೆ ಕಾಂಪೌಂಡ್ ಹೊರಗೂ ಗಿಡಗಳದ್ದೇ ಸಾಮ್ರಾಜ್ಯ. ಚಾವಣಿಯಲ್ಲಿ ಮತ್ತೊಂದು ಹಸಿರುಲೋಕ. ಮುರಳಿ ಅವರು ಕಾಲೇಜಿನಲ್ಲಿ ಓದುತ್ತಿದ್ದಾಗ ತಂದಿದ್ದ ಬೋನ್ಸಾಯ್ ಗಿಡ ಈಗಲೂ ಮನೆ ಮುಂದೆ ನಗುತ್ತಿದೆ.

ಸಾಕು ನಾಯಿಗಳು, ಬೆಕ್ಕುಗಳ ಜೊತೆಗೆ, ಹೆಸರು ಕರೆದ ತಕ್ಷಣ ಬರುವ ಆಮೆ ಕೂಡ ಈ ಮನೆಯಲ್ಲಿನ ಅಚ್ಚರಿಯ ಸಂಗತಿ. ಸಂಗ್ರಹಕ್ಕೆ ಸೇರಬೇಕಾದ ವಸ್ತುಗಳು ಇನ್ನೂ ಸಾಕಷ್ಟಿವೆ ಎನ್ನುತ್ತಾರೆ ಮುರಳಿ. 'ರಾಜಸ್ಥಾನದ ಥರಾವರಿ ಕುಸುರಿ ವಸ್ತುಗಳನ್ನು ತರುವ ಆಸೆಯಿದೆ. ಕುಂದಾಪುರ ಕಡೆಯ ಹಿತ್ತಾಳೆ, ಕಂಚಿನ ವಸ್ತುಗಳನ್ನು ಸಂಗ್ರಹಿಸಬೇಕಿದೆ. ದೆಹಲಿ ಸಮೀಪದ ಕೆಲವು ಊರುಗಳಲ್ಲಿನ ಸಾಂಪ್ರದಾಯಿಕ ಮರದ ವಸ್ತುಗಳನ್ನು ತರಬೇಕಿದೆ' ಎಂದು ದೊಡ್ಡ ಪಟ್ಟಿಯನ್ನೇ ಮುಂದಿಡುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in